ದಿನಾಂಕಃ  02.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀಸವಾಲುಃ 7 ರಿಂದ 12 ನೇ ಪ್ರತಿವಾದಿಯರ ಪರ ಶ್ರೀ. ಬಿ. ಕೆ. ಜೆ ವಕೀಲರಿಂದಃ**

ನಾನು 7 ನೇ ತರಗತಿಯವರೆಗೆ ಓದಿರುತ್ತೇನೆ. ಬಿಲಕುಂದಿ ಗ್ರಾಮದಲ್ಲಿ ನಮಗೆ ಜಮೀನುಗಳು ಇರುವುದಿಲ್ಲ. ಬಿಲಕುಂದಿ ಗ್ರಾಮದಿಂದ ಮೆಳವಂಕಿ ಗ್ರಾಮವು ಸುಮಾರು 10-15 ಕಿ.ಮೀ ಅಂತರದಲ್ಲಿರುತ್ತದೆ. ನಾನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಾವಾ ಆಸ್ತಿಗಳ ದಾಖಲೆಗಳನ್ನು  ನೋಡಿರುವುದಿಲ್ಲ. 1ನೇ ವಾದಿಯ ತಂದೆಯ ಹೆಸರು ರಾಮಯ್ಯಾ. ವಾದಿಯ ತಂದೆಯ ಮನೆತನದಲ್ಲಾಗಲೀ, ಅವಳ ಗಂಡನ ಮನೆತನದಲ್ಲಾಗಲೀ ನಾನು ಯಾವುದೇ ಹಿರಿತನವನ್ನು ಮಾಡಿರುವುದಿಲ್ಲ.  ಸದರೀಯವರ ಮನೆತನಕ್ಕೆ ಎಷ್ಟು ಆದಾಯ ಇತ್ತು ಎಂಬುವ ಬಗ್ಗೆ ನಾನು ಯಾವುದೇ ಕಾಗದಪತ್ರಗಳನ್ನು ನೋಡಿರುವುದಿಲ್ಲ. ಈ ದಿನ ನ್ಯಾಯಾಲಯದ ಮುಂದೆ ಇರುವ 11ನೇ ಪ್ರತಿವಾದಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವರ ಪರಿಚಯ ನನಗೆ ಇರುತ್ತದೆ. 11ನೇ ಪ್ರತಿವಾದಿ ಯಾವುದೇ ಆಸ್ತಿಯನ್ನು ಖರೀದಿಸಿರುವುದಿಲ್ಲ. ಸರ್ವೆ ನಂಬರ 406/1 ಜಮೀನಿನ ಪಹಣಿಪತ್ರಿಕೆ ಯಾರ ಹೆಸರಲ್ಲಿ ಇರುತ್ತದೆಂದರೆ ಸಾಕ್ಷಿ ನಾನು ಪಹಣಿಪತ್ರಿಕೆ ನೋಡಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ 406/4 ಜಮೀನಿನ ಪಹಣಿಪತ್ರಿಕೆ ಯಾರ ಹೆಸರಲ್ಲಿ ಇರುತ್ತದೆಂದರೆ ಸಾಕ್ಷಿ ನಾನು ಪಹಣಿಪತ್ರಿಕೆ ನೋಡಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಮನೆ ನಂಬರ 70/1 ಮೃತ ರಾಮಯ್ಯನ ಹೆಸರಿನಲ್ಲಿ ಇರುತ್ತದೆ. ಸದರಿ ಸ್ವತ್ತು ಮುಂಚೆ ಭದ್ರವ್ವ ಹಿರಮೇಠರವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ ಭದ್ರವ್ವಳು ಸದರಿ ಆಸ್ತಿಯನ್ನು ಪ್ರೇಮವ್ವ ಇವಳಿಗೆ ಹಕ್ಕುಬಿಟ್ಟ ಪತ್ರ ಮಾಡಿಕೊಟ್ಟಿರುತ್ತಾಳೆಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಮೂರು

ಜಮೀನುಗಳು ಹಾಗೂ ಒಂದು ಮನೆಗೆ ಸಂಬಂಧಿಸಿದಂತೆ ಹೂಡಿರುತ್ತಾರೆ. 8 ಮತ್ತು 9 ನೇ ಪ್ರತಿವಾದಿಯರು ದಾವಾ ಆಸ್ತಿಗಳ ಪೈಕಿ ಸರ್ವೆ ನಂಬರ 406/1 ಹಾಗೂ ಸರ್ವೆ ನಂಬರ 406/4 ಒಟ್ಟು 04 ಎಕರೆ 06 ಗುಂಟೆ ಜಮೀನನ್ನು 5 ಮತ್ತು 6 ನೇ ಪ್ರತಿವಾದಿಯರ ತಂದೆಯಾದ ದೇವೇಂದ್ರಯ್ಯಾರವರಿಂದ ಖರೀದಿಸಿರುತ್ತಾರೆಂದರೆ ಖೊಟ್ಟಿ ಖರೀದಿ ಪತ್ರ ಮಾಡಿಕೊಂಡಿರುತ್ತಾರೆಂದು ನುಡಿಯುತ್ತಾರೆ. ಸದರಿ ಜಮೀನುಗಳನ್ನು ಖರೀದಿಸಿದಾಗಿನಿಂದ ಸುಮಾರು 35 ವರ್ಷಗಳಿಂದ ಸದರೀರವರ ಹೆಸರುಗಳು ಪಹಣಿಪತ್ರಿಕೆಯಲ್ಲಿ ದಾಖಲು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಮೇಲೆ ಹೇಳಿದ ಜಮೀನುಗಳಲ್ಲಿ ಒಂದು ಬಾಂವಿ ಇರುತ್ತದೆ ಎಂದರೆ ನಿಜ. ನಾನು ಮುಂಚೆ ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸಿದಾಗ ಮೇಲೆ ಹೇಳಿದ ಎರಡೂ ಜಮಿನುಗಳನ್ನು ದಾವಾ ಆಸ್ತಿಗಳನ್ನಾಗಿ ಸೇರ್ಪಡೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಮೇಲೆ ಹೇಳಿದ ಎರಡೂ ಜಮೀನುಗಳು ಖರೀದಿದಾರರ ಹೆಸರಿನಲ್ಲಿ ಇದ್ದು, ಅವರೇ ಇವತ್ತಿವರೆಗೂ ಕಬ್ಜಾ ವಹಿವಾಟಿಯಲ್ಲಿದ್ದು, ಸಾಗುವಳಿ ಮಾಡುತ್ತಿದ್ದಾರೆಂದರೆ ಸರಿಯಲ್ಲ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ವಾದಿಯರಿಗೆ ಯಾವುದೇ ರೀತಿ ಹಕ್ಕು, ಹಿತಾಸಕ್ತಿ ಹೊಂದಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ವಾದಿಯರಿಗೆ ಯಾವುದೇ ರೀತಿ ಹಕ್ಕು ಇರದೇ ಇದ್ದರೂ ಸಹ ಅವರಿಗೆ ಅನುಕೂಲ ಮಾಡಲು ನಾನು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಮೇಲೆ ಹೇಳಿದ ಜಮೀನುಗಳಲ್ಲಿ ಜೋಳ, ಗೋವಿನ ಜೋಳ, ಹತ್ತಿ, ಗೋಧಿ, ಸದಕದ ಬೆಳೆಗಳನ್ನು ಬೆಳೆಯುತ್ತಾರೆ. ಸದರಿ ಜಮೀನುಗಳಲ್ಲಿರುವ ಬಾಂವಿಗೆ ಪಂಪಸೆಟ್ ಇರುತ್ತದೆ ಅದು ಈಗ ಯಾರ ಹೆಸರಿನಲ್ಲಿ ಇರುತ್ತದೆಂದು ನನಗೆ ಗೊತ್ತಿಲ್ಲ. ಸದರಿ ದಾವಾ ಆಸ್ತಿಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇರದೇ ಇದ್ದರೂ ಸಹ ವಾದಿಯರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಸಾಕ್ಷ್ಯ

ಪ್ರಮಾಣಪತ್ರದಲ್ಲಿ ಬರೆದಿರುವ ಎಲ್ಲಾ ವಿಚಾರಗಳು ಸುಳ್ಳಾಗಿದ್ದು, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ ರೀತಿ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ

(ಮಹಾದೇವ ಕಾನಟ್ಟಿ)
1ನೇ ಹೆಚ್ಚುವರಿ ಹಿರಿಯ ದಿವಾಣಿ
ನ್ಯಾಯಾಧೀಶರು, ಗೋಕಾಕ

ಸಾಕ್ಷಿಯ ಸಹಿ